ಊ) 1985ರಿಂದಲೂ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಿರುವ ಈ ಜನಾಂಗದವರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಜಾತಿ ಪ್ರಮಾಣ ಪತ್ರ ಕೋರುತ್ತಿದ್ದು ಇದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು;

ಋ) ಗುರುತಿನ ಚೀಟಿಯನ್ನು ವಿತರಿಸಿರುವ ಸರ್ಕಾರ ಇವರ ಜಾತಿ ಪ್ರಮಾಣ ಪತ್ರ ಹಾಗೂ ಇತರೆ ಮೂಲಭೂತ ಸೌಕರ್ಯ ನೀಡದಿರಲು ಕಾರಣವೇನು; ಈ ಬಗ್ಗೆ ಕೈಗೊಂಡಿರುವ ಕ್ರಮವೇನು?

ಶ್ರೀ ಡಿ.ಸುಧಾಕರ (ಸಮಾಜ ಕಲ್ಯಾಣ ಸಚಿವರು) :

ಅ) ಇಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಉ) ಬೌರಿ ಈ ರೀತಿಯ ಕಾಗುಣಿತವಿರುವ ಬೌರಿ ಜನಾಂಗವು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರ್ಪಡೆಯಾಗಿರುವುದಿಲ್ಲ ಹಾಲಿ ಚಾಲ್ತಿಯಲ್ಲಿರುವ ದಿನಾಂಕ: 30-03-2002ರ ಸರ್ಕಾರದ ಆದೇಶದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಪ್ರವರ್ಗ 1ರಲ್ಲಿನ ಕ್ರಮಸಂಖ್ಯೆ 73ರಲ್ಲಿ ವಾಗ್ರಿ (vagri) ಈ ರೀತಿಯ ಕಾಗುಣಿತವಿರುವ (Spelling) ಜಾತಿಯನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಲಾಗಿದೆ.

ಊ) ಬೌರಿ (vagri) ಜನಾಂಗಕ್ಕೆ ಸಂಬಂಧಿಸಿದಂತೆ ಯಾವುದೇ ಮನವಿ ಇರುವುದಿಲ್ಲ.

ಋ) ಅನ್ವಹಿಸುವುದಿಲ್ಲ.

199 ಡಾ॥ ಮಹದೇವಪ್ಪ ಹೆಚ್.ಸಿ. : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ರೈತರ ಸಾಲ ಮನ್ನಾ ಯೋಜನೆಯಡಿ ರಾಜ್ಯಕ್ಕೆ ನೀಡಲಾಗಿರುವ ಅನುದಾನವೆಷ್ಟು? ಒಟ್ಟು ರೈತ ಸಂಖ್ಯೆ ಎಷ್ಟು?

ಆ) ಈ ಪೈಕಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ವರ್ಗದ ರೈತರುಗಳ ಸಂಖ್ಯೆ ಎಷ್ಟು? ಸಾಲ ಮನ್ನಾ ಆಗಿರುವ ಮೊತ್ತ ಎಷ್ಟು? (ಪ್ರತ್ಯೇಕವಾಗಿ ಮಾಹಿತಿ ನೀಡುವುದು)

ಶ್ರೀ ಲಕ್ಷ್ಮಣ ಸ. ಸವದಿ (ಸಹಕಾರ ಸಚಿವರು) :

ಅ) ಕೇಂದ್ರ ಸರ್ಕಾರ ರೈತರ ಸಾಲ ಮನ್ನಾ ಯೋಜನೆಯಡಿ ಒಟ್ಟು 2,87,362 ರೈತರಿಗೆ ಸಂಬಂಧಿಸಿದಂತೆ ರೂ.454.08 ಕೋಟಿಗಳ ಬೇಡಿಕೆಯು ಸ್ವೀಕೃತವಾಗಿದ್ದು ಈ ಪೈಕಿ ರೂ.330.12 ಕೋಟಿಗಳನ್ನು ಕೇಂದ್ರ ಸರ್ಕಾರವು ಈವರೆಗೆ ಬಿಡುಗಡೆ ಮಾಡಿರುತ್ತದೆ.

ಆ) ಈ ಪೈಕಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ವರ್ಗದ ರೈತರುಗಳ ಸಂಖ್ಯೆ ಹಾಗೂ ಸಾಲ ಮನ್ನಾ ಆಗಿರುವ ಮೊತ್ತ ವಿವರ:-

(ರೂ. ಲಕ್ಷಗಳಲ್ಲಿ)

ಕ್ರ.ಸಂ.		ರೈತರ ಸಂಖ್ಯೆ	ಮನ್ನಾ ಮಾಡಿರುವ ಮೊತ್ತ
1.	ಪರಿಶಿಷ್ಟ ಜಾತಿ	15,914	2549.16
2.	ಪರಿಶಿಷ್ಟ ವರ್ಗ	9,966	1686.26
3.	ಹಿಂದುಳಿದ ವರ್ಗ	50,278	10,304.90
	ಒಟ್ಟು	**76,158**	**14540.32**

234 ಶ್ರೀ ಸುನೀಲ್ ವಿ.ಹೆಗಡೆ, ಹಳಿಯಾಳ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಇಂಜಿನಿಯರ್ ಗಳ ಸಂಖ್ಯೆ ಎಷ್ಟು (ಹುದ್ದೆವಾರು ಮಾಹಿತಿ ನೀಡುವುದು):

ಆ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಇಂಜಿನಿಯರ್‌ಗಳ ಸಂಖ್ಯೆ : ಒಟ್ಟು **1822**

ಹುದ್ದೆವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಲೋಕೋಪಯೋಗಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಲ್ಲಿ ನೇರ ನೇಮಕಾತಿ ಪಾಲಿನ 104 ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದಿಂದ